# ಶ್ರೀ ಹರಿಕಥಾಮೃತಸಾರ

ನಾಗರಾಜು ಹಾವೇರಿ, ಪಲ್ಲವೀಪ್ರಿಯ – 99010 52578

## 20೦ ಅವರೋಹಣ ತಾರತಮ್ಯ ಸಂಧಿ

ಶ್ರೀರಮಣ ನಿಜ ಭಕ್ತರೆನಿಸುವ ವಾರಿಜಾಸರ ಮುಖ್ಯನಿರ್ಜರ
ತಾರತಮ್ಯವ ಪೇಳ್ವೆ ಸಂಕ್ಷೇಪದಲಿ ಗುರುಬಲದಿ ॥ ಪಲ್ಲವಿ ॥

ಶ್ರೀರಮಣನಾದ ಶ್ರೀಹರಿಯ ನಿಜಭಕ್ತರೆನ್ನಿಸುವ ಕಮಲನಾಭನಾದ ಬ್ರಹ್ಮದೇವರೇ ಮೊದಲಾದ ದೇವತೆಗಳ ತಾರತಮ್ಯವನ್ನು ಗುರುಗಳ ಅನುಗ್ರಹದಿಂದ ಸಂಕ್ಷಿಪ್ತವಾಗಿ ಹೇಳುವೆನು.

ಕೇಶವಗೆ ನಾರಾಯಣಿಗೆ ಕಮಲಾಸನ ಸಮೀರಣಗೆ ವಾಣಿಗೆ
ವೀಶಫಣಿಪಮಹೇಶರಿಗೆ ಷಣ್ಮಹಿಷಿಯರ ಪದಕೆ
ಶೇಷರುದ್ರರ ಪತ್ನಿಯರಿಗೆ ಸುವಾಸವ ಪ್ರದ್ಯುಮ್ನರಿಗೆ ಸಂ–
ತೋಷದಲಿ ವಂದಿಸುವೆ ಭಕ್ತಿ ಜ್ಞಾನ ಕೊಡಲೆಂದು ॥ ೧ ॥

ಬ್ರಹ್ಮರುದ್ರ ಪ್ರವರ್ತಕನಾದ ಶ್ರೀಹರಿಗೆ, ಆತನ ಪತ್ನಿ ಮಹಾಲಕ್ಷ್ಮೀಗೆ, ಬ್ರಹ್ಮ, ವಾಯುಗಳಿಗೆ, ಸರಸ್ವತೀ – ಭಾರತೀದೇವಿಯರಿಗೆ, ಪಕ್ಷಿರಾಜನಾದ

ಗರುಡ, ನಾಗರಾಜನಾದ ಶೇಷ ಮತ್ತು ಮಹೇಶನಾದ ಶಿವ – ಇವರಿಗೆ, ಷಣ್ಮಹಿಷಿಯರ ಪಾದಗಳಿಗೆ, ಗರುಡ, ಶೇಷ ಮತು ರುದ್ರದೇವರ ಪತ್ನಯರಾದ ಸೌಪರ್ಣೀ, ವಾರುಣೀ ಮತ್ತು ಪಾರ್ವತಿಯವರಿಗೆ, ಇಂದ್ರ, ಕಾಮರಿಗೆ ಭಕ್ತಿ ಜ್ಞಾನವನ್ನು ಕೊಡಲೆಂದು ಸಂತೋಷದಿಂದ ವಂದಿಸುವೆನು.

ಪ್ರಾಣದೇವಗೆ ನಮಿಪೆ ಕಾಮನಸೂನು ಮನು ಗುರು ದಕ್ಷ ಶಚಿ ರತಿ
ಮಾನಿನಿಯರಿಗೆ ಪ್ರವಹದೇವಗೆ ಸೂರ್ಯ ಸೋಮ ಯಮ
ಮಾನವಿಗೆ ವರುಣನಿಗೆ ವೀಣಾಪಾಣಿ ನಾರದಮುನಿಗೆ ನಮಿಸುವೆ
ಜ್ಞಾನ ಭಕ್ತಿ ವಿರಕ್ತಿ ಮಾರ್ಗವ ತಿಳಿಸಲೆನಗೆಂದು ॥ ೨ ॥

ಅಹಂಕಾರಿಕ ಪ್ರಾಣದೇವರಿಗೆ ನಮಸ್ಕರಿಸುವೆನು. ಕಾಮಪುತ್ರನಾದ ಅನಿರುದ್ಧನಿಗೆ, ಸ್ವಾಯಂಭುವ ಮನು, ಬೃಹಸ್ಪತಿ, ದಕ್ಷಪ್ರಜಾಪತಿ, ಶಚಿ, ರತಿ ಎಂಬ ಇಂದ್ರ ಮತ್ತು ಕಾಮರ ಪತ್ನಿಯರಿಗೆ, ಪ್ರವಹವಾಯುವಿಗೆ, ಸೂರ್ಯ, ಸೋಮ, ಯಮ, ಶತರೂಪಾದೇವಿಯರಿಗೆ, ವರುಣನಿಗೆ, ವೀಣಾಪಾಣಿಯಾದ ನಾರದಮುನಿ ನನಗೆ ಜ್ಞಾನ ಭಕ್ತಿ ವಿರಕ್ತಿಯ ದಾರಿಯನ್ನು ತಿಳಿಸಿಕೊಡಲೆಂದು ನಮಸ್ಕರಿಸುವೆನು.

ಅನಲ ಭೃಗು ದಾಕ್ಷಾಯಣಿಯರಿಗೆ ಕನಕಗರ್ಭಜ ಸಪ್ತಋಷಿಗಳಿ-
ಗೆಣೆ ಎನಿಪ ವೈವಸ್ವತಮನು ಗಾಧಿಸಂಭವಗೆ
ದನುಜ ನಿರಋತಿ ತಾರ ಪ್ರಾವಹಿವನಜಮಿತ್ರಗ್ರಾಶ್ವಿನಿ ಗಣಪ
ಧನಪ ವಿಷ್ವಕ್ಸೇನರಿಗೆ ವಂದಿಸುವೆನನವರತ ॥ ೩ ॥

ಅಗ್ನಿ, ಭೃಗು, ಪ್ರಸೂತಿಯರಿಗೆ, ಹಿರಣ್ಯಗರ್ಭನಾದ ಬ್ರಹ್ಮದೇವರ ಪುತ್ರರಾದ ಸಪ್ತಋಷಿಗಳಿಗೆ, ಅವರಿಗೆ ಸಮ ಎನಿಪ ವೈವಸ್ವತಮನು ಮತ್ತು ಗಾಧಿಪುತ್ರನಾದ ವಿಶ್ವಾಮಿತ್ರಮುನಿಗೆ, ನಿಋುತಿ, ತಾರೆ, ಪ್ರಾವಹಿ, ಮಿತ್ರನಾಮಕ ಸೂರ್ಯನಿಗೆ, ಅಶ್ವಿನಿ ದೇವತೆಗಳಿಗೆ, ಗಣೇಶ, ಕುಭೇರ, ಮತ್ತು ವಿಷ್ವಕ್ಸೇನರಿಗೆ ಅನವರತ ವಂದಿಸುವೆನು.

ಉಕ್ತದೇವರ್ಕಳನುಳಿದು ಎಂಭತ್ತಯಿದು ಜನರುಗಳು ಮನುಗಳು
ಚಥ್ಯ ಚ್ಯಾವನ ಯಮಳರಿಗೆ ಕರ್ಮಜರೆನಿಸುತಿಪ್ಪ
ಕಾರ್ತವೀರ್ಯಾರ್ಜುನರೆ ಪ್ರಮುಖ ಶತಸ್ಥರಿಗೆ ಪರ್ಜನ್ಯ ಗಂಗಾ-
ದಿತ್ಯ ಯಮ ಸೋಮಾನಿರುದ್ಧರ ಪತ್ನಿಯರ ಪದಕೆ ॥ ೪ ॥

ಮೇಲೆ ಹೇಳಿರುವ ದೇವತೆಗಳನ್ನು ಬಿಟ್ಟು ೮೫ ಜನ ಶೇಷಶತಸ್ಥರಾದ ಸೋಮಪಾನಾರ್ಹ ದೇವತೆಗಳಿಗೆ, ೧೧ ಮನುಗಳಿಗೆ, ಉಚಥ್ಯ, ಚ್ಯವನರಿಗೆ, ಕರ್ಮಜದೇವತೆಗಳೆಂದು ಕರೆಸುವ ಕಾರ್ತವೀರ್ಯಾರ್ಜುನನೇ ಮೊದಲಾದ ೧೦೦ ಚಕ್ರವರ್ತಿಗಳಿಗೆ, ಪರ್ಜನ್ಯನೆಂಬ ಸೂರ್ಯ, ಗಂಗಾ, ಆದಿತ್ಯ ಎಂಬ ಮತ್ತೊಬ್ಬ ಸೂರ್ಯ, ಯಮಪತ್ನಿ ಶ್ಯಾಮಲಾ, ಚಂದ್ರಪತ್ನಿ ರೋಹಿಣೀ ಮತ್ತು ಅನಿರುದ್ಧಪತ್ನಿ ಉಷಾ ಇವರ ಪಾದಗಳಿಗೆ ನಮಸ್ಕರಿಸುವೆ.

ಹುತವಹಾರ್ಧಾಂಗಿನಿಗೆ ಚಂದ್ರಮ ಸುತ ಬುಧಗೆ ನಾಮಾತ್ಮಿಕೋಷಾ-
ಸತಿಗೆ ಛಾಯಾತ್ಮಜ ಶನೈಶ್ಚರಗಾನಮಿಪೆ ಸತತ
ಪ್ರತಿದಿವಸದಲಿ ಬಿಡದೆ ಜೀವ ಪ್ರತತಿ ಮಾಡುವ ಕರ್ಮಗಳಿಗಧಿ-
ಪತಿ ಎನಿಪ ಪುಷ್ಕರನ ಪಾದಾಂಬುಜಗಳಿಗೆ ನಮಿಪೆ ॥ ೫ ॥

ಅಗ್ನಿಪತ್ನಿ ಸ್ವಾಹಾದೇವಿಗೆ, ಚಂದ್ರಪುತ್ರ ಬುಧನಿಗೆ, ನಾಮಾಭಿಮಾನಿಯಾದ ಉಷಾದೇವಿಗೆ, ಛಾಯಾಪುತ್ರನಾದ ಶನೈಶ್ಚರನಿಗೆ ನಾನು ಸತತ ನಮಸ್ಕರಿಸುವೆನು. ಪ್ರತಿದಿವಸದಲ್ಲಿ ಬಿಡದೆ ಜೀವರ ಗುಂಪುಗಳು ಮಾಡುವ ಕರ್ಮಗಳಿಗೆ ಅಧಿಪತಿಯೆನಿಸುವ ಪುಷ್ಕರನ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ.

ಆನಮಿಪೆ ಆಜಾನಜರಿಗೆ ಕೃಶಾನುಸುತರಿಗೆ ಗೋವ್ರಜದೊಳಿಹ
ಮಾನಿನಿಯರಿಗೆ ಚಿರಪಿತರು ಶತನ್ಯೂನ ಶತಕೋಟಿ
ಮೌನಿಜನರಿಗೆ ದೇವಮಾನವ ಗಾನಪ್ರೌಢರಿಗವನಿಪರಿಗೆ ರ-
ಮಾನಿವಾಸನ ದಾಸವರ್ಗಕೆ ನಮಿಪೆನನವರತ ॥ ೬ ॥

ಆಜಾನಜದೇವತೆಗಳಿಗೆ, ಅಗ್ನಿಪುತ್ರರಿಗೆ, ಗೋಕುಲದಲ್ಲಿದ್ದ ಗೋಪಿಯರಿಗೆ, ಚಿರಪಿತೃಗಳಿಗೆ, ನೂರು ಕಡಿಮೆ ನೂರುಕೋಟಿ ಋಷಿಗಳಿಗೆ, ದೇವಗಂಧರ್ವರು ಮತ್ತು ಮನುಷ್ಯ ಗಂಧರ್ವರಿಗೆ, ಶ್ರೀಲಕ್ಷ್ಮೀನಿವಾಸನಾದ ಶ್ರೀಹರಿಯ ದಾಸವರ್ಗವೆಂಬ ಮನುಷ್ಯೋತ್ತಮರಿಗೆ ನಾನು ಸದಾ ನಮಸ್ಕರಿಸುವೆನು.

ಅನುಕ್ರಮಣಿಕಾತಾರತಮ್ಯವ ಅನುದಿನದಿ ಸದ್ಭಕ್ತಿಪೂರ್ವಕ
ನೆನೆವರಿಗೆ ಧರ್ಮಾರ್ಥಕಾಮಾದಿಗಳು ಫಲಿಸುವವು
ವನಜಸಂಭವಮುಖ್ಯರವಯವರೆನಿಸುವ ಜಗನ್ನಾಥವಿಠಲಗೆ
ವಿನಯದಿಂದಲಿ ನಮಿಸಿ ಕೊಂಡಾಡುತಿರು ಮರೆಯದಲೆ ॥ ೭ ॥

ಅವರೋಹಣ – ಅನುಕ್ರಮಣಿಕಾತಾರತಮ್ಯವನ್ನು ಪ್ರತಿದಿವಸದಲ್ಲಿ ಸದ್ಭಕ್ತಿಪೂರ್ವಕವಾಗಿ ನೆನೆಯುವವರಿಗೆ ಧರ್ಮ, ಅರ್ಥ, ಕಾಮಗಳು ಸಿದ್ಧಿಸುವುದು. ಬ್ರಹ್ಮ ಮೊದಲಾದವರು ಅವಯವಳು ಎನಿಸುವ ಜಗನ್ನಾಥವಿಠಲನಾದ ಶ್ರೀಹರಿಗೆ ವಿನಯದಿಂದ ನಮಸ್ಕರಿಸಿ ಅವನನ್ನು ಮರೆಯದೇ ಕೊಂಡಾಡುತ್ತಿರು.